ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಿಯತ್ತಿರೋ ನಾಯೀನ ಹೊರಗಿಟ್ಟು ಸಾಕ್ತೇವೆ. ಕಳ್ಳಬೆಕ್ಕನ್ನ ಒಳಗಿಟ್ಟು ಸಾಕ್ತೇವೆ. ಇದು ತಪ್ಪಲ್ಲವೆ?



ಇದನ್ನೇ ಓಟ್ ಹಾಕುವಾಗ ಜ್ಞಾಪಕದಲ್ಲಿಟ್ಟುಕೊಂಡರೆ ದೇಶದ ಏಳ್ಗೆ ನಿಶ್ಚಿತ.

ಪಿ. ಜಯವಂತ ಪೈ, ಕುಂದಾಪುರ

ಬಾವಿಗೂ ಬಾಯಿಗೂ ವ್ಯತ್ಯಾಸವೇನು?

ಬಾವಿಗೆ ಬಿದ್ದವರನ್ನು ಎತ್ತಬಹುದು. ಬಾಯಿಗೆ ಬಿದ್ದವರನ್ನು ಎತ್ತುವುದು ಬಹಳ ಕಷ್ಟ.

ಪಿ. ಚಿದಾನಂದ, ಜವನಗೊಂಡನಹಳ್ಳಿ

ನಾಳೆ ಯಾವಾಗ ಸಾಯುತ್ತದೆ?

ನಾಳಿದ್ದಿನ ಹಿಂದಿನ ಮಧ್ಯರಾತ್ರಿ.

ಜಿ. ನಾಗೇಂದ್ರ, ಬೆಂಗಳೂರು

ಕೊರೊನಾ ಮೊದಲನೆಯದು ಸಾಧಾರಣ ಅಲೆ. ಎರಡನೆಯದು ಭಾರಿ ಕೊಲೆ. ಮೂರನೆಯದು?

ಬಂದರೆ ಅದು ಜನರ ಹೊಣೆಗೇಡಿತನದ ಸೆಲೆ.

ಮಧುಮತಿ ಅಭಿಷೇಕ್, ಚಿತ್ರದುರ್ಗ

ಮಳ್ಳಿ ಮಳ್ಳಿ ಮಂಚಕ್ಕೆಷ್ಟು ಕಾಲುಂದ್ರೆ ಮೂರು ಮತ್ತೊಂದು ಅಂತ ಏಕೆ ಹೇಳಬೇಕು?



‘ಅಂದರೆ ಏದಾ?’ ಎಂದು ಮೊದ್ದುಮೊದ್ದಾಗಿ ಕೇಳಿದವರಿಗೆ ಟೋಪಿ ಹಾಕಲು.

ಬೆಂ.ಮು. ಮಾರುತಿ, ಬೆಂಗಳೂರು

ಎಣ್ಣೆ ತರಬೇಕಾ ಅಂತ ಹೆಂಡತೀನ ಕೇಳಿದ್ದೇ ತಡ, ತವರಿಗೆ ಹೋಗ್ತೀನೀಂತ ಹುಬ್ಬೇರಿಸ್ತಾಳಲ್ಲಾ...?

ವಾಹ್! ಮನೆಯಲ್ಲೇ ಪಾರ್ಟಿ ಮಾಡಲು ಇಷ್ಟು ಬೇಗ ಕ್ಲಿಯರೆನ್ಸ್ ಕೊಡುವವರು ಅಪರೂಪ.

ಹರಿತಸ, ಬೆಂಗಳೂರು

ಗುಂಡಿನ ಚಕಮಕಿಗೂ ಮಾತಿನ ಚಕಮಕಿಗೂ ವ್ಯತ್ಯಾಸವೇನು?

ಮಾತಿನ ಚಕಮಕಿ ಸೆಲೆಕ್ಷನ್ ರೌಂಡ್ಸ್; ಗುಂಡಿನ ಚಕಮಕಿ ಗ್ರ್ಯಾಂಡ್ ಫಿನಾಲೆ.

ವೈದೇಹಿ ಶೇಖರ್, ಮೈಸೂರು

ಜೀವನದ ಅತ್ಯಂತ ಪ್ರಮುಖ ಘಟ್ಟ ಯಾವುದು?

‘ಪಶ್ಚಿಮ ಘಟ್ಟ’ ಎಂದರು ಪರಿಸರಪ್ರೇಮಿಗಳು.

ಮಹಾವೀರ ಕಾಸರ, ಶಿವಮೊಗ್ಗ

ನಿಮ್ಮ ಅಡ್ರೆಸ್ ಗೊತ್ತಾಯ್ತು. ಡ್ರೆಸ್ ಗೊತ್ತಾಗಲಿಲ್ಲ...?

ಜೀನ್ಸ್ ಪ್ಯಾಂಟ್, ಫ್ಯಾಷನೆಬಲ್ ಟಾಪ್, ಚಳಿಯಿದ್ದರೊಂದು ಸ್ಟೋಲ್...

ಕಾವ್ಯಶ್ರೀ ಪತ್ರಿಮಠ, ಸುರಪುರ

ಸಹವಾಸದೋಷ ಯಾರನ್ನೂ ಬಿಟ್ಟಿಲ್ಲವಂತಲ್ಲಾ...?

20 ವರ್ಷ ನಿದ್ರಿಸಿದ ರಿಪ್ ವ್ಯಾನ್ ವಿಂಕಲ್‌ಗೆ ಆ ತೊಂದರೆಯೇ ಕಾಡಲಿಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಭ್ರಷ್ಟರು ಸತ್ತಾಗ ‘ತುಂಬಲಾರದ ನಷ್ಟ’ ಆಗುವುದೇಕೆ?

ಅವರಿಂದ ದೇಶಕ್ಕೆ ತುಂಬಲಾರದ ನಷ್ಟ ಆಗಿರುತ್ತದಲ್ಲ.

ಬಿದರಹಳ್ಳಿ ನಾಗರಾಜ, ಹಿರೇಹಡಗಲಿ

ಬದುಕೋಕೆ ದುಡ್ಡು ಬೇಕು. ಆದರೆ ದುಡ್ಡೇ ಬದುಕು ಆಗಬಾರದು ಅಲ್ವಾ ಸಾರ್?

ನಿಜ. ಒಂದು ಮಿತಿ ಮೀರಿದ ಮೇಲೆ ದುಡ್ಡು ತಿಜೋರಿಯಲ್ಲೇ ಕೊಳೆಯುವ ಕಸ.

ಜೀವಿ, ತರೀಕೆರೆ

ನಲವತ್ತರ ಸನಿಹವಿರುವ ನನ್ನಾಕೆಗೆ ಕಿವಿ ಸ್ವಲ್ಪ ಮಂದ. ವೈದ್ಯರಿಗೆ ತೋರಿಸಲೋ ಬೇಡವೋ?

ಹೆಂಡತಿ ಮನೆಯ ಎಂಜಿನ್. ಎಂದೂ ಸುಸ್ಥಿತಿಯಲ್ಲಿರಬೇಕು. ನಿಮ್ಮ ಗಂಟಲಿಗೇ ಗಾಣ ಹಾಕಿಕೊಳ್ಳಿ.

ಶರತ್ ಎಸ್, ಬೆಂಗಳೂರು

ನಿರಂತರವಾಗಿ ಬರುತ್ತಿದ್ದ ಕೆಲವರ ಪ್ರಶ್ನೆಗಳು ಏಕಾಏಕಿ ನಿಂತಿದ್ದನ್ನು ನೋಡಿದರೆ ಸ್ವರ್ಗಸ್ಥರಾದರೆಂದು ತಿಳಿಯಬಹುದೆ?

ಕೊರೊನಾ ವಾಲಂಟಿಯರ್ಸ್ ಸೇವೆ ಮಾಡುತ್ತಾ ಬಿಡುವಿಲ್ಲದಿರಬಹುದು ಎಂದುಕೊಳ್ಳೋಣ.

## ವಾರದ ಪ್ರಶ್ನೆ

ಮಲ್ಲಿಕಾರ್ಜುನ, ಸುರಧೇನುಪುರ

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಇದೆ. ಕೊಳೆಗೇರಿ ನಿರ್ಮೂಲನ ಮಂಡಳಿ ಯಾಕಿಲ್ಲ?

ಕಸ, ಧೂಳು, ಕೊಳೆ, ಕೊಳೆಗೇರಿಗಳನ್ನು ಶುಚಿ ಮಾಡಬಹುದು, ನಿರ್ಮೂಲನ ಅಸಾಧ್ಯ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

ಉದ್ಯೋಗಂ ಪುರುಷ ಲಕ್ಷಣಂ. ಸ್ತ್ರೀ ಲಕ್ಷಣಂ ಏನು ಸ್ವಾಮಿ?

ಉದ್ಯೋಗಸ್ಥ ಪುರುಷ ಅವಲಕ್ಷಣವಾಗಿ ಆಡದಂತೆ ನಿಯಂತ್ರಿಸುವುದು.

ಬೂಕನಕೆರೆ ವಿಜೇಂದ್ರ, ಮೈಸೂರು

ಜೀವವಿದ್ದರೆ ಜೀವನ ಎಂದು ಈಗಲಾದರೂ ಮನುಷ್ಯನಿಗೆ ತಿಳಿಯಿತೆ?

ಹವಾ ಇದ್ದರೆ ಹಾಸಿಗೆ, ಮನಿ ಇದ್ದರೆ ಮೆಡಿಸನ್ನು ಎನ್ನುವುದೂ ಅನುಭವವಾಯಿತಲ್ಲ.

ಕೆ.ಎಂ. ವಿಭೂತಿ, ಹರಿಹರ

ಕುಡುಕರೇ ಸರ್ಕಾರದ ದೇವರಾದರೂ ಸರ್ಕಾರ ಯಾವ ಕುಡುಕನಿಗೂ ಸ್ಮಾರಕ ನಿರ್ಮಿಸಿಲ್ಲವೇಕೆ?



ನೂರಾರು ರೌಡಿಗಳು, ಮಂತ್ರಿಗಳು, ಉದ್ಯಮಿಗಳ ಪೈಕಿ ಯಾರ ಸ್ಮಾರಕವೆಂದು ನಿರ್ಧರಿಸಲಾಗಿಲ್ಲವಂತೆ.

ಎಸ್.ಜಿ. ಹವಾಲದಾರ್, ಬಾಗಲಕೋಟೆ

ಖಾಸಗಿ ಆಸ್ಪತ್ರೆ, ಖಾಸಗಿ ಶಾಲೆ, ಖಾಸಗಿ ಬಸ್; ಮೂರೂ ಖಾಸಾ ಅಣ್ಣತಮ್ಮಂದಿರಂತೆ ಅಲ್ಲವೆ?

ನಿಜ. ಕಾಸನ್ನು ಅಗಿದಗಿದು ನುಂಗುವ ಸಹಪಂಕ್ತಿ ಭೋಜನದವು ಇವು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ನಮ್ಮ ಸಂಬಂಧಗಳು ಹೇಗಿರಬೇಕು?

sumವಿಷಯಕ್ಕೆ ಸಡಿಲ ಆಗದಂತೆ.

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in